ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂ: ಡಿಟಿಇ/ಎನ್‌ಎಸ್‌ಎಸ್/14/ಇ–ಪ್ರಶಸ್ತಿ/2012–13

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು–01,
ದಿನಾಂಕ; 20–01–2014

ಸುತ್ತೋಲೆ

ವಿಷಯ:– ಇಲಾಖಾ ಮಟ್ಟದ ರಾಸೇಯೋ ಪ್ರಶಸ್ತಿ ಬಗ್ಗೆ.
ಉಲ್ಲೇಖ:– ದಿನಾಂಕ:12–12–2014 ರಂದು ನಡೆದ ರಾಜ್ಯಮಟ್ಟದ ಸಲಹಾ ಸಮಿತಿ ಸಭೆಯ ಕಾರ್ಯಸೂಚಿ –ಇ–(4) ಕಂಡಿಕೆ (5)

*****

ಪ್ರಸ್ತುತ 2012–13 ನೇ ಸಾಲಿನ ವರೆಗೆ ಹಾಗೂ ಮುಂದುವರೆದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ಮಟ್ಟದ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಉತ್ತಮ ಸಾಧನೆ ಮಾಡಿರುವ ಪಾಲಿಟೆಕ್ನಿಕ್ ಘಟಕ, ಕಾರ್ಯಕ್ರಮಾಧಿಕಾರಿ ಮತ್ತು ಉತ್ತಮ ಸ್ವಯಂ ಸೇವಕ–ಸೇವಕಿಯರನ್ನು ಗುರುತಿಸಿ, ಅವರಿಗೆ ಪ್ರಶಸ್ತಿ ನೀಡಿ ಪ್ರೋತ್ಸಾಹಿಸುವ ಉದ್ದೇಶವನ್ನು ಹೊಂದಿದ್ದು, ಆಯಾ ಸಾಲಿನ ಪ್ರಶಸ್ತಿ ವಿಜೇತರಿಗೆ ಈ ಕೆಳಗಿನಂತೆ ಪ್ರಶಸ್ತಿಗಳನ್ನು ಹಾಗೂ ನಗದು ಬಹುಮಾನದ ಜೊತೆಗೆ ಪ್ರಶಸ್ತಿ ಫಲಕ ಮತ್ತು ಅಭಿನಂದನಾ ಪತ್ರವನ್ನು ನೀಡಿ ಗೌರವಿಸಲಾಗುವುದು.

## <u>ಪ್ರಶಸ್ತಿ ವಿವರ</u>

| ಕ್ರ ಸಂ | ಪ್ರಶಶಸ್ತಿ ವಿಭಾಗ | ಪ್ರಶಸ್ತಿ ಸಂಖ್ಯೆ | ಪ್ರಶಸ್ತಿ ಕೊಡುಗೆ |
|---|---|---|---|
| 01 | ಉತ್ತಮ ಕಾರ್ಯಕ್ರಮಾಧಿಕಾರಿ, ಹಾಗೂ ಉತ್ತಮ ಘಟಕ | 03 | ರೂ. 6000/– ನಗದು ಹಾಗೂ ರೂ.3000/– ಮತ್ತು ಪಾರಿತೋಷಕ ಮತ್ತು ಪ್ರಮಾಣ ಪತ್ರ |
| 02 | ಉತ್ತಮ ಸ್ವಯಂ ಸೇವಕ | 03 | ರೂ.3000/– ನಗದು ಹಾಗೂ ಪಾರಿತೋಷಕ ಮತ್ತು ಪ್ರಮಾಣ ಪತ್ರ |
| 03 | ಉತ್ತಮ ಸ್ವಯಂ ಸೇವಕಿ | 03 | ರೂ. 3000/– ನಗದು ಹಾಗೂ ಪಾರಿತೋಷಕ ಮತ್ತು ಪ್ರಮಾಣ ಪತ್ರ |

ಅರ್ಹ ಆಸಕ್ತರು ತಮ್ಮ ಸ್ವ–ವಿವರ (ಭಾವ ಚಿತ್ರ ಸಹಿತ) ಕೆಳಗೆ ಸೂಚಿಸಲಾದ ಎನ್ ಎಸ್ ಎಸ್ ಪ್ರಶಸ್ತಿಯ **ಅರ್ಹತಾ <u>ನಿಯಮಗಳ ಅನುಸಾರ ಸಾಧನೆಗಳ ಸಚಿತ್ರ ವಿವರಗಳನ್ನು</u>** ಪುಸ್ತಕ ರೂಪದಲ್ಲಿ ದಿನಾಂಕ: 12–02–2014 ರೊಳಗೆ ಕಾರ್ಯಕ್ರಮ ಸಂಯೋಜನಾಧಿಕಾರಿ, ರಾಷ್ಟ್ರೀಯ ಸೇವಾ ಯೋಜನೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ತಾಂತ್ರಿಕ ಭವನ ಒಂದನೇ ಮಹಡಿ ಕೊಠಡಿ ಸಂಖ್ಯೆ–106 ಅರಮನೆ ರಸ್ತೆ ಬೆಂಗಳೂರು–560001 ಇವರಿಗೆ ಸಲ್ಲಿಸಲು ಸೂಚಿಸಿದೆ.

ನಿರ್ದೇಶಕರು,

ಪ್ರತಿ: – ರಾಜ್ಯದ ಎನ್ ಎಸ್ ಎಸ್ ಘಟಕ ಹೊಂದಿರುವ ಪಾಲಿಟೆಕ್ನಿಕ್, ಪ್ರಾಚಾರ್ಯರುಗಳಿಗೆ ಮುಂದಿನ ಕ್ರಮಕ್ಕಾಗಿ

1. ರಾಜ್ಯ ಸಂಪರ್ಕಾಧಿಕಾರಿಗಳು ರಾಜ್ಯ ಎನ್ ಎಸ್ ಎಸ್ ಕೋಶ ಯುವಜನ ಸೇವಾ ಇಲಾಖೆ, ಬೆಂಗಳೂರು.
2. ಸಹಾಯಕ ಕಾರ್ಯಕ್ರಮ ಸಲಹೆಗಾರರು ಎನ್ ಎಸ್ ಎಸ್ ಪ್ರಾದೇಶಿಕ ಕಛೇರಿ ಬೆಂಗಳೂರು

## ಪ್ರಶಸ್ತಿಯನ್ನು ಪಡೆಯಲು ಇರಬೇಕಾದ ಎನ್ ಎಸ್ ಎಸ್ ಅರ್ಹತಾ ನಿಯಮಗಳು

1. **ಘಟಕಗಳು ಹಾಗೂ ಕಾರ್ಯಕ್ರಮಾಧಿಕಾರಿಗಳು,**
   ಅ) ರಾ.ಸೇ.ಯೋ ಘಟಕ ಅವಿರತವಾಗಿ ಕಡೆ ಪಕ್ಷ 5 ವರ್ಷಗಳ ಕಾಲ ಅಸ್ತಿತ್ವದಲ್ಲಿರಬೇಕು.
   ಆ) ಕಳೆದ ಮೂರು ವರ್ಷಗಳಲ್ಲಿ ನಿಗದಿತ ಸ್ವಯಂ ಸೇವಕರ ನೊಂದಣಿ ಮತ್ತು ವಿಶೇಷ ಶಿಬಿರಗಳ ವ್ಯವಸ್ಥೆಯಲ್ಲಿ ಗುರಿ ಮುಟ್ಟಿರಬೇಕು.
   ಇ) ಘಟಕವು ಹಳ್ಳಿಯನ್ನು/ಕೊಳಗೇರಿಯನ್ನು ದತ್ತಯ ಸ್ವೀಕೃತಿ ಅಲ್ಲಿ ಕಳೆದ ಮೂರು ವರ್ಷಗಳಲ್ಲಿ ಅವಿರತವಾಗಿ ಚಟುವಟಿಕೆಯನ್ನು ಹಮ್ಮಿಕೊಂಡು ವಿಶಿಷ್ಟ ಸಾಧನೆ ಮಾಡಿರಬೇಕು.
   ಈ) ದತ್ತು ಗ್ರಾಮ ಕೊಳಗೇರಿಗಳಲ್ಲಿ ಉಪಯುಕ್ತವಾದ ಶಾಶ್ವತವಾದ ಸಮುದಯ ಅಸ್ತಿಯನ್ನು ಕ್ರೋಡಿಕರಿಸಿರಬೇಕು.
   ಉ) ದತ್ತು ಗ್ರಾಮ ಕೊಳಗೇರಿಗಳಲ್ಲಿ ಸ್ಥಳಿಯರೊಡನೆ ಉತ್ತಮ ಸಂಪರ್ಕವನ್ನು ಬೆಳಸಿ ಅವರ ಖಾಸಗಿ ಹಾಗೂ ಸಾಮೂಹಿಕ ಸಮಸ್ಯೆಗಳಿಗೆ ಸ್ಪಂದಿಸಿರಬೇಕು.
   ಊ) ಕಾರ್ಯಕ್ರಮಾಧಿಕಾರಿಗಳನ್ನು ಮಾರ್ಗಸೂಚಿಯ ಪ್ರಕಾರ ನೇಮಕ ಮಾಡಿರಬೇಕು.
   ಋ) ಅವರಿಗೆ ತರಬೇತಿ ಮತ್ತು ಪ್ರಶಿಕ್ಷಣ ಕೇಂದ್ರದಲ್ಲಿ ಅಧಿಕೃತವಾಗಿ ತರಬೇತಿಯಾದ ನಂತರ ಕಡೇ ಪಕ್ಷ 2 ವರ್ಷ ಕಾರ್ಯಕ್ರಮಾಧಿಕಾರಿಯಾಗಿ ಕೆಲಸ ಮಾಡಿರಬೇಕು.
   ೠ) ಅವರ ಮೇಲೆ ಯಾವುದೇ ಕ್ರಿಮಿನಲ್ ವಿಚಾರಣೆ ಅಥವಾ ಮೊಕದ್ದಮೆ ಇರಬಾರದು.

## ಈ ಬಗ್ಗೆ ಗಮನಿಸಬೇಕಾದ ಇತರೆ ಅಂಶಗಳು:-

1. ಕಾಲೇಜು ಮತ್ತು ಊರಿನಲ್ಲಿ ರಾ.ಸೇ.ಯೋ ಘಟಕ ಹಾಗೂ ರಾ.ಸೇ.ಯೋ ಅಧಿಕಾರಿ ಇವರ ಬಗ್ಗೆ ಇರುವ ಜನರಿಗಿದ್ದ ನಂಬಿಕೆ.
2. ಪ್ರಾಂಶುಪಾಲರು ಮತ್ತು ಕಾಲೇಜಿನ ಅಧ್ಯಾಪಕ ವರ್ಗ, ರಾಸೇಯೋ ಅಧಿಕಾರಿಗಳು ರಾ.ಸೇ.ಯೋ ಚಟುವಟಿಕೆಗಳ ಬಗ್ಗೆ ತೋರಿಸುವ ಆಸಕ್ತಿ ಮತ್ತು ಕಾರ್ಯಶ್ರದ್ಧೆ.
3. ಕಾಲಮಿತಿಯಲ್ಲಿ ಸರಿಯಾಗಿ ಕಾರ್ಯಕ್ರಮವನ್ನು ಹಾಕಿಕೊಳ್ಳುವುದ ಮತ್ತು ಅವುಗಳನ್ನು ಪೂರೈಸುವುದು.
4. ರಾ.ಸೇ.ಯೋ ಚಟುವಟಿಕೆಗಳ ಗುಣ ಮಟ್ಟ ಮತ್ತು ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ಕೋರಿರುವ ಕಾರ್ಯಶ್ರದ್ಧೆ ಮತ್ತು ಕಾರ್ಯ ನೈಪುಣ್ಯತೆ.
5. ಸ್ಥಳಿಯ ಇಲಾಖೆಗಳ ಹಾಗೂ ಸಂಸ್ಥೆಯ ಸಹಕಾರ
6. ಸಾಕ್ಷರತೆ, ಪರಿಸರ ಅಭಿವೃದ್ಧಿ ಇವುಗಳಲ್ಲಿ ಮಾಡಿರುವ ಒಟ್ಟಾರೆ ಪ್ರಗತಿ.

## ಸ್ವಯಂ ಸೇವಕರನ್ನು ಪ್ರಶಸ್ತಿಗಳಿಗೆ ಆರಿಸಲು ಇರಬೇಕಾದ ಅರ್ಹತೆಗಳು :-

1. ವಿದ್ಯಾರ್ಥಿ 2ವರ್ಷ ರಾ.ಸೇ.ಯೋ ಸ್ವಯಂ ಸೇವಕನಾಗಿರಬೇಕು.
2. ಅವಿರತವಾಗಿ 2 ವರ್ಷದ ಅವಧಿಯಲ್ಲಿ ಕನಿಷ್ಠ 240 ಗಂಟೆಗಳ ಕಾಲ ರಾ.ಸೇ.ಯೋ ಸಮುದಾಯ ಅಭಿವೃದ್ಧಿ ಚಟುವಟಿಕೆಯಲ್ಲಿ ಭಾಗವಹಿಸಿರಬೇಕು.
3. ಕಡೇ ಪಕ್ಷ 2 ಸಂಸ್ಥೆಯ ಶಿಬಿರಗಳಲ್ಲಿ ಭಾಗವಹಿಸಿರಬೇಕು ಮತ್ತು ಕೇಂದ್ರ ಸರ್ಕಾರ ಯೋಜಿಸಿದ್ದ ಒಂದು ರಾಷ್ಟ್ರೀಯ ಮಟ್ಟದ ಶಿಬಿರ. (ರಾಷ್ಟ್ರೀಯ ಭಾವೈಕ್ಯತೆ ಶಿಬಿರ) ಅಂತರ ರಾಜ್ಯ ವಿನಿಮಯ ಕಾರ್ಯಕ್ರಮ ಗಣರಾಜ್ಯೋತ್ಸವ ಪಥ ಸಂಚಲನ ಇತ್ಯಾಧಿಗಳಲ್ಲಿ ಭಾಗವಹಿಸಿರಬೇಕು.
4. 18 ರಿಂದ 25 ವರ್ಷಗಳ ವಯೋ ಮಿತಿಯಲ್ಲಿರಬೇಕು.
5. ಶೈಕ್ಷಣಿಕ ಚಟುವಟಿಕೆಗಳಲ್ಲಿಯೂ ಉತ್ತಮ ಪ್ರಗತಿ ಇರಬೇಕು.